# ಬನ್ನಿ, ದಕ್ಷಿಣೇಶ್ವರಕ್ಕೆ



ಸ್ವಾಮಿ ಆಶುತೋಷಾನಂದ

ಸ್ವಾಮಿ ಶಿವಾನಂದರು ಒಮ್ಮೆ ಉದ್ಗರಿಸಿದರು: "ದಕ್ಷಿಣೇಶ್ವರವು ಸಾಕ್ಷಾತ್ ವಾರಾಣಸಿಯೆಂದೇ ನನ್ನ ಭಾವನೆ. ವಾರಾಣಸಿಯಂತೆ ಇದೂ ಈ ವ್ಯಾವಹಾರಿಕ ಜಗತ್ತಿಗೆ ಸೇರಿದ್ದಲ್ಲ. ಶ್ರೀರಾಮಕೃಷ್ಣರು ಇಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ನೆಲಸಿದ್ದರು. ಅಲ್ಲಿ ಅದೆಷ್ಟು ವಿಧವಾದ ಆಧ್ಯಾತ್ಮಿಕ ಸಾಧನೆಗಳಲ್ಲಿ ಅವರು ನಿರತರಾಗಿದ್ದರು! ಎಷ್ಟೊಂದು ಬಗೆಯ ಭಾವೋನ್ಮೋದ ಮತ್ತು ಇಂದ್ರಿಯಾತೀತ ದರ್ಶನಗಳನ್ನು ಅವರು ಅಲ್ಲಿ ಹೊಂದಿದರು! ಶ್ರೀರಾಮಕೃಷ್ಣರ ಜೀವಿತದ ದಿವ್ಯನಾಟಕವು ಅನಾವರಣಗೊಳ್ಳಲು ಆರಂಭಿಸಿದ್ದು ಅಲ್ಲಿಯೇ ತಾನೆ!"

ದಕ್ಷಿಣೇಶ್ವರದಿಂದ ಬೇಲೂರುಮಠಕ್ಕೆ ವಾಹನದಲ್ಲಿ ೩೦ ನಿಮಿಷಗಳ ಒಳಗೆ ಹೋಗಬಹುದು. ಇದು ಗಂಗೆಯ ಪೂರ್ವ ತಟದಲ್ಲಿ ಇದೆ. ಅಥವಾ ಬೇಲೂರುಮಠದಿಂದ ೩೦ ನಿಮಿಷಗಳ ಕಾಲ ದೋಣಿ ವಿಹಾರ ಮಾಡಿದರೂ ದಕ್ಷಿಣೇಶ್ವರವನ್ನು ತಲುಪಬಹುದು. ದೋಣಿಯಲ್ಲಿ ಹೋಗುವುದು ನಿಜಕ್ಕೂ ಒಂದು ಸ್ಮರಣೀಯ ಅನುಭವವಾಗುವುದು. ಏಕೆಂದರೆ, ದೋಣಿಯಿಂದ ಬೇಲೂರುಮಠದ ದೇವಾಲಯಗಳು ಮತ್ತು ದಕ್ಷಿಣೇಶ್ವರದ ದೇವಾಲಯಗಳ ವಿಹಂಗಮ ನೋಟ ನಮಗೆ ಕಾಣಸಿಗುತ್ತದೆ.

ರಾಣಿ ರಾಸಮಣಿಯು ಈ ದೇವಸ್ಥಾನಗಳ ಸಮುಚ್ಚಯವನ್ನು ೧೮೫೫ರಲ್ಲಿ, ಜಗನ್ಮಾತೆ ಕಾಳೀದೇವಿಯ ಆದೇಶದಂತೆ ಕಟ್ಟಿದಳು. ಈ ಸ್ಥಳದ ಪವಿತ್ರತೆಯ ಬಗ್ಗೆ ಶ್ರೀರಾಮಕೃಷ್ಣರು ಒಮ್ಮೆ ಹೀಗೆ ಹೇಳುತ್ತಾರೆ: "ರಾಣಿ ರಾಸಮಣಿ ಆಯ್ಕೆ ಮಾಡಿದ ಈ ಭೂಮಿಯ ಒಂದು ಭಾಗ ಒಬ್ಬ ಇಂಗ್ಲಿಷ್ ವ್ಯಕ್ತಿಗೆ ಸೇರಿದ್ದಾಗಿತ್ತು. ಇದರ ಇನ್ನೊಂದು ಭಾಗದಲ್ಲಿ ಒಬ್ಬ ಫಕೀರನ ಸ್ಮರಣೆಯೊಂದಿಗೆ ಸಂಬಂಧ ಇರುವ ಮುಸ್ಲಿಮರ ಸ್ಮಶಾನ ಇತ್ತು. ಸ್ಮಶಾನದ ಭಾಗ ಆಮೆಯ ಬೆನ್ನಿನ ಆಕಾರದಲ್ಲಿತ್ತು. ಇಂಥ ಜಾಗವು ತಂತ್ರಶಾಸ್ತ್ರದ ಪ್ರಕಾರ (ಜಗನ್ಮಾತೆಯ ಪೂಜಾರಾಧನೆಗಳನ್ನು ವಿಧಿಸುವ ಶಾಸ್ತ್ರಗಳು) ಶಕ್ತಿದೇವತೆಯ ಪ್ರತಿಷ್ಠಾಪನೆಗೆ ಮತ್ತು ಆಕೆಯ ಕುರಿತಾದ ಸಾಧನೆಗೆ ಅತ್ಯಂತ ಸೂಕ್ತವಾದುದು. ಆದ್ದರಿಂದ, ಯಾವುದೋ ಒಂದು ಅದೃಷ್ಟಶಕ್ತಿಯ ಮಾರ್ಗದರ್ಶನವೋ ಎಂಬಂತೆ, ರಾಣಿಯು ಈ ಸ್ಥಳವನ್ನು ಕೊಂಡುಕೊಂಡಳು."

ಈ ರೀತಿಯಲ್ಲಿ, ಸಹಜವಾಗಿಯೇ ಪವಿತ್ರಸ್ಥಾನವಾಗಿದ್ದ ಈ ಜಾಗವು, ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರು ಮತ್ತು ಇತರ ಸಾಕ್ಷಾತ್ ಶಿಷ್ಯರು ಹಾಗೂ ಇಲ್ಲಿ ವಾಸಿಸಿದ್ದ ಅಥವಾ ಭೇಟಿಕೊಟ್ಟಿದ್ದ ವಿವಿಧ ಪಂಗಡಗಳಿಗೆ ಸೇರಿದ ಹಲವಾರು ಮಹಾನ್ ಸಾಧಕರ ಸಂಸರ್ಗದಿಂದ ಇನ್ನೂ ಪುನೀತವಾಗಿದೆ. ಹೀಗಾಗಿ ಇದರ ಬಗ್ಗೆ ಮುಂಚೆಯೇ ಚೆನ್ನಾಗಿ ಅರಿತುಕೊಂಡು, ದಕ್ಷಿಣೇಶ್ವರದ ಯಾತ್ರೆ ಮಾಡುವುದು ಹೆಚ್ಚು ಪ್ರಯೋಜನಕಾರಿ. ಅದಕ್ಕಾಗಿ ಎರಡು ಉದ್ಗ್ರಂಥಗಳಾದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ', 'ಶ್ರೀರಾಮಕೃಷ್ಣ ವಚನವೇದ' ಮತ್ತು ಶ್ರೀಮಾತೆಯವರ ಜೀವನಚರಿತ್ರೆಯನ್ನು ಅಧ್ಯಯನ ಮಾಡುವುದು ಬಹಳ ಒಳ್ಳೆಯದು.

### ದೇವಾಲಯದ ಅಂಗಣ

ನಾವು ದೇವಾಲಯದ ಸಮುಚ್ಚಯವನ್ನು ಮುಖ್ಯದ್ವಾರದ ಮೂಲಕ ಪ್ರವೇಶಿಸೋಣ. ಮೆಟಲ್ ಡಿಟೆಕ್ಟರ್ ಮೂಲಕ ಸಾಗಿ ಒಳಗೆ ಹೋದಾಗ, ಚೌಕಾಕೃತಿಯಲ್ಲಿ ಇರುವ, ನೆಲ ಮಟ್ಟಸಗೊಂಡಿರುವ ದೊಡ್ಡ ಅಂಗಣವನ್ನು ಕಾಣುತ್ತೇವೆ. ಅದು ಉತ್ತರ–ದಕ್ಷಿಣ ದಿಕ್ಕಿನಲ್ಲಿ ಸಾಗುತ್ತದೆ. ನಮ್ಮ ಬಲಕ್ಕೆ ಹನ್ನೆರಡು ಶಿವಲಿಂಗಗಳಿರುವ ಪುಟ್ಟ ಪುಟ್ಟ ದೇಗುಲಗಳಿವೆ. ಗಂಗೆಯ ಕಡೆಗೆ